ಅದಕ್ಕಾಗಿ ಈಗಾಗಲೇ ಜಾಗ ಖರೀದಿಸಿಯಾಗಿದೆ. ಪೇಂಟಿಂಗನ್ನು ವೀಕ್ಷಿಸಲು ಬರುವ ಜನ ನೀಡುವ ಪ್ರವೇಶ ಶುಲ್ಕದಿಂದಲೇ ತನ್ನ ಹೂಡಿಕೆಯನ್ನು ವಾಪಸ್ ಪಡೆಯುವ ಇಂಗಿತ ಆತನದು. ಅಂದಹಾಗೆ, ಇವೆಲ್ಲ ನಡೆಯುವುದು ವರ್ಚುಅಲ್ ಜಗತ್ತಿನಲ್ಲಿ! ವಿಚಿತ್ರವೆಂದರೆ, ಶತಕೋಟ್ಯಧಿಪತಿಗಳ ಗುಂಪಿಗೆ ಸೇರುವ ಈ ವಿಗ್ನೇಶ್ ಸುಂದರೇಸನ್ ವಾಸಿಸುತ್ತಿರುವುದು ಹತ್ತಡಿಯ ಬಾಡಿಗೆ ಮನೆಯಲ್ಲಿ. ಆತನಿಗೆ ಸ್ವಂತದ್ದೊಂದು ಕಾರು ಕೂಡಾ ಇಲ್ಲ. ಅವನ ಕೆಲಸ, ಸಂಪಾದನೆ, ಆಸ್ತಿಗಳೇನೇ ಇದ್ದರೂ ಅವೆಲ್ಲ ಮಿಥ್ಯಾವಾಸ್ತವ ಪ್ರಪಂಚದಲ್ಲೇ ಇವೆ. ಭವಿಷ್ಯವೆಂಬುದು ಆ ಲೋಕದಲ್ಲೇ ಇದೆ, ಇಲ್ಲೇನೂ ಇಲ್ಲ ಎಂಬುದು ಆತನ ಬಲವಾದ ನಂಬಿಕೆ.

ಇನ್ನೊಂದು ಸಂಗತಿ ನನ್ನ ಕಾಲ ಬುಡದಲ್ಲೇ ಜರುಗಿದ್ದು. ಪ್ರೈಮರಿ ಓದುತ್ತಿರುವ ನನ್ನ ಮಗಳಿಗೆ ಮನೆಯಲ್ಲಿ ನಾಯಿಯೊಂದನ್ನು ಸಾಕಬೇಕೆಂಬ ಆಸೆ. ಆದರೆ, ಅವಳ ಬೇಡಿಕೆಯನ್ನು ಹಲವು ಕಾರಣ ನೀಡಿ ನಾವು ತಳ್ಳಿಹಾಕುತ್ತಲೇ ಬಂದಿದ್ದೆವು. ಇತ್ತೀಚಿನ ಆರೆಂಟು ತಿಂಗಳಲ್ಲಿ ಆಕೆ ನಾಯಿಯ ಬಗ್ಗೆ ಪ್ರಸ್ತಾಪಿಸುವುದನ್ನು ಸಂಪೂರ್ಣವಾಗಿ ನಿಲ್ಲಿಸಿದ್ದಳು. ಹೀಗೇ ಮೊನ್ನೆ ಕುತೂಹಲಕ್ಕೆಂದು ಆಕೆಯ ನಾಯಿ ಸಾಕುವ ಬಯಕೆಯ ಬಗ್ಗೆ ನಾನು ವಿಚಾರಿಸಿದಾಗ, 'ಅದಕ್ಕೆರಡು ಕ್ಯೂಟ್ ಮರಿಗಳಾಗಿವೆ ಈಗ' ಎಂದು ಉತ್ತರಿಸಿದಳು. ಅಚ್ಚರಿಗೊಂಡು ನಾವು ಹೆಚ್ಚಿನ ವಿವರಗಳನ್ನು ಕೆದಕಿದಾದ ತಿಳಿದದ್ದಿಷ್ಟು: ಆಕೆ ಒಂದು ಊರಿನಲ್ಲಿ ವಾಸಿಸುತ್ತಿದ್ದಾಳೆ. ಆಕೆಗೆ ಅಲ್ಲೊಂದು ಪುಟ್ಟ ಮನೆಯಿದೆ. ಸುತ್ತಮುತ್ತ ಸಾಕಷ್ಟು ಗೆಳತಿಯರಿದ್ದಾರೆ. ಮನೆಯಲ್ಲಿ ಚೆಂದದೊಂದು ನಾಯಿಯನ್ನೂ ಸಾಕಿಕೊಂಡಿದ್ದಾಳೆ. ನಾಯಿಯೊಡಗೂಡಿ ಶಾಲೆಗೂ ಹೋಗುತ್ತಾಳೆ. ಒಮ್ಮೆ ಆ ನಾಯಿಗೆ ಏನೋ ಅನಾರೋಗ್ಯವಾಗಿ ವೈದ್ಯರಲ್ಲಿ ಹೋಗಿದ್ದಳಂತೆ; ಅದರ ತಪಾಸಣೆಗೆ ಹಣ ಬೇಕು ಎಂಬುದು ಆಗ ಆಕೆಗೆ ಅರಿವಾಗಿದೆ. ಅದರ ಬೆನ್ನಲೇ ಹಣ ಸಂಪಾದಿಸುವ




ಕಾಗದದ ರೂಪಾಯಿಯಲ್ಲಿರುವ ಭೌತಿಕ ಸ್ಪರ್ಶಕ್ಕೆ, ಯಾರೋ ಒಬ್ಬ ಅನಾಮಿಕನ ಪ್ರಮಾಣವನ್ನೂ ಪುಷ್ಟೀಕರಿಸುವ ಶಕ್ತಿಯಿದೆ. ಆದರೆ, ಡಿಜಿಟಲ್ ವಹಿವಾಟಿನಲ್ಲಿ, ಹಣ ಸ್ಪರ್ಶ ಹಾಗೂ ನೋಟಕ್ಕೆ ದಕ್ಕುವುದೇ ಇಲ್ಲ. ಯಾರೋ ಅದನ್ನು ನಿಮಗೆ ಕೊಟ್ಟು, ಅದನ್ನು ನೀವೆಲ್ಲೋ ಇಟ್ಟು, ಮುಂದೆ ಮತ್ಯಾರಿಗೋ ನೀಡಿ, ಆತ ಅದನ್ನು ಅವನದಾಗಿಸಿಕೊಳ್ಳುತ್ತ ನೂರಾರು ಕೈ ದಾಟಿದರೂ ಯಾರ ಬೆರಳಿಗೂ ಅದು ತಾಕುವುದಿಲ್ಲ.